ರಾಜ್ಯದಲ್ಲಿರುವ ಕಂದಾಯ ಇಲಾಖೆಯ ಕಛೇರಿಗಳ ವ್ಯವಹಾರಗಳನ್ನು ಆಧುನೀಕರಣಗೊಳಿಸುವ ಬಗ್ಗೆ

೩೦. ಶ್ರೀ ಎಲ್. ಆರ್. ಶಿವರಾಮೇಗೌಡ(ನಾಗಮಂಗಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂದಾಖಲೆಗಳ ಸರ್ವೇ ಇಲಾಖೆ, ತಾಲ್ಲೂಕು ಕಛೇರಿ ಮತ್ತು ಸಬ್ ರಿಜಿಸ್ಟ್ರಾರ್ ಕಛೇರಿಗಳ ವ್ಯವಹಾರಗಳನ್ನು ಆಧುನೀಕರಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ಈಗಿರುವ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ವಿಶೇಷವಾಗಿ ಗ್ರಾಮೀಣ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ತಾಲ್ಲೂಕು ಕಛೇರಿಗಳಲ್ಲಿರುವ ಸಿಬ್ಬಂದಿಯವರು ಗ್ರಾಮೀಣ ಜನತೆಯನ್ನು ಗೌರವದಿಂದ ಕಾಣುವಂತೆ ಎಲ್ಲಾ ತಹಶೀಲ್ದಾರರುಗಳಿಗೆ ಆದೇಶ ನೀಡುವರೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

ಅ) ರಾಜ್ಯದಲ್ಲಿನ ಕಂದಾಯ ಇಲಾಖೆಯು ಆಡಳಿತ ವ್ಯಾಪ್ತಿಯಲ್ಲಿ ಬರುವ ಹದಿನೈದು (೧೫) ತಾಲ್ಲೂಕು ಕಛೇರಿಗಳನ್ನು ಆಧುನೀಕರಣಗೊಳಿಸಲು ಸರ್ಕಾರವು ಈ ಕೆಳಗೆ ಹೇಳಿರುವಂತೆ ಇಂಟರ್ ಕಾಂ ಪದ್ಧತಿ, ಪ್ಲೈನ್ ಪೇಪರ್ ಕಾಪಿಯರ್ ಯಂತ್ರ, ಕ್ಯಾಲ್ಕ್ಯೂಲೇಟರ್ಸ್ ವ್ಯಾಕೂಮ್ ಕ್ಲೀನರ್ ಫೈರ್ ಎಕ್ಸ್‌ಟ್ವಿಂಗ್ಷರ್ (ರಿಕಾರ್ಡ್ ರೂಂನಲ್ಲಿ ಉಪಯೋಗಿಸಲು) ದೊಡ್ಡ ಕಛೇರಿಗಳಲ್ಲಿ ಪೋಸ್ಟಲ್ ಫ್ರಾಂಕಿಂಗ್ ಯಂತ್ರಗಳನ್ನು ಅಳವಡಿಸಿ ಈಗಾಗಲೇ ಆಧುನೀಕರಣಗೊಳಿಸಲಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಇವುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ಸೂಕ್ಷ್ಮ ಚಿತ್ರ ಘಟಕವನ್ನು ಅಳವಡಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಭೂಮಾಪನ ಇಲಾಖೆಯಲ್ಲಿ ಭೂ ದಾಖಲೆಗಳನ್ನು ಆಧುನೀಕರಣಗೊಳಿಸಲು ಹೆಚ್. ಎಂ. ಟಿ. ಪರಿಮಿತಿ, ಬೆಂಗಳೂರು, ಇವರಿಂದ ಆಧುನೀಕ ಮುದ್ರಣ ಯಂತ್ರವನ್ನು ಖರೀದಿಸಲು ಸರ್ಕಾರವು ೧೯ ಲಕ್ಷ ರೂ. ಮಂಜೂರು ಮಾಡಿರುತ್ತದೆ.

ಬೆಂಗಳೂರು ಉಪ ವಿಭಾಗದ ವ್ಯಾಪ್ತಿಯಲ್ಲಿರುವ ಒಂದು ಗ್ರಾಮದ ಭೂ ದಾಖಲೆಗಳ ಗಣಕೀಕರಣದ ಕಾರ್ಯವನ್ನು ಪ್ರಯೋಗಾತ್ಮಕವಾಗಿ ಕರ್ನಾಟಕ ಸರ್ಕಾರದ ಗಣಕೀಕರಣ ಕೇಂದ್ರಕ್ಕೆ ವಹಿಸಲಾಗಿದೆ.

ಆ) ಕೆಲವು ಪ್ರಕರಣಗಳಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ಬಗ್ಗೆ ಈಗಾಗಲೇ ಸೂಕ್ತ ನಿರ್ದೇಶನ ನೀಡಲಾಗಿದೆ. ಮತ್ತೊಮ್ಮೆ ಇದನ್ನು ಸ್ಪಷ್ಟಪಡಿಸಲಾಗುವುದು.